ಇದ್ದು ನಮಗೆ ತಿಳಿ ಏಳ್ಬೇಕು, ತಪ್ಪು ಒಪ್ಪು ತಿಳಿಸಾಕೆ ನಿನ್ನ ಕೈಲಿ ಮಾತ್ರ ಆಗೋದು. ಮನೆ ಪರಿಸ್ಥಿತಿ ಬಗ್ಗೆ ತುಂಬಾ ಚಿಂತೆ ಅತ್ತಿತ್ತು. ಶಾಂಬನ ಬಗ್ಗೆ ತುಂಬಾನೇ ಬ್ಯಾಸರ ಆಗೈತೆ, ಏನಕ್ಕ ಮಾಡ್ಲಿ, ಎಷ್ಟು ಹೇಳಿದ್ರೂ ಕೇಳಾಕಿಲ್ಲ. ಗಂಡು ಮಗಾ ಇಲ್ಲಾ ಅಂತ ಶ್ಯಾನೆ ಬ್ಯಾಸ್ರ ಮಾಡ್ಕಂಡಿದ್ದಾಳೆ. ಎಣ್ಣುಮಕ್ಳೇನು ಮಕ್ಳಲ್ವಾ ಅಕ್ಕಾ, ಅದ್ಯಾಕೆ ಅಂಗಾಡ್ತಾಳೊ, ಮಕ್ಳೆ ಇಲ್ದೆ ಇದ್ರೆ ಯೋಚ್ನೆ ಮಾಡ್ಬೇಕಿತ್ತು. ಮುತ್ನಂಗೆ ಮೂರು ಮಕ್ಳಿದ್ದರೆ, ಗಂಡು ಮಗ ಬೇಕು ಅಂತ ಹರಕೆ ಪೂಜೆ ಎಲ್ಲಾ ಮಾಡಿದ್ಲು. ಕೊನೆಗೂ ಆಗಲಿಲ್ಲ, ಆ ದ್ಯಾವರು ಕೊಡದೇ ಇದ್ರೆ ಏನು ಮಾಡೋಕೆ ಆಯ್ತದೆ, ಪಾಲ್ಗೆ ಬಂದದ್ದು ಪಂಚಾಮೃತ ಅಲ್ವೇನಕ್ಕ. ನಮ್ಮ ಮಕ್ಳು ಯಾರಿಗೆ ಕಡ್ಮೆ ಆಗವ್ರೆ. ಇದನ್ನ ಹೆಂಗಕ್ಕ ಅವ್ಳಿಗೆ ಅರ್ಥ ಮಾಡ್ಸದ್ರೊ, ನಂಗಂತು ಅದೇ ಚಿಂತೆ ಆಗ್ಬುಟ್ಟೈತೆ, ಇವಳು ಅದ್ಯಾವಾಗ ಬದ್ಲಾಗ್ತಳೊ. ನಮ್ಮ ವೀರೇಶನ್ನೇ ನಮ್ಮ ಮಗ ಅಂತ ಅಂದ್ಕಳಕೆ ಆಗಾಕಿಲ್ವಾ' ಮನದೊಳಗಿದ್ದ ಕಹಿಯನ್ನೆಲ್ಲ ಅಕ್ಕನ ಮುಂದೆ ಕಕ್ಕಿದರು.

'ಹೋಗ್ಲಿ ಬಿಡೊ ಜಗ, ನಿಧಾನ್ವಾಗಿ ಶಾಂಭ ಬದ್ಲಾಗ್ತಾಳೆ. ಮನ್ಸೊಳ್ಗೆ ಒಟ್ಗೆ ಇರೊಗಂಟಾ ಅಂಗೆಯಾ, ಆಮೇಕೆ ಅವ್ಳಗೆ ವೀರೇಶನ ಮ್ಯಾಲೆ ಪಿರೂತಿ ಬಂದೇ ಬರ್‍ತೈತೆ ತಗೊ. ಯ್ಯಾಕೆ ಈ ಪಾಟಿ ಚಿಂತೆ ಮಾಡಿಯಾ, ಆಗೋದೆಲ್ಲ ಒಳ್ಳೆದಕ್ಕೆ ಅಂದ್ಕೊ ಜಗ, ಈಗೇನು ಮಾತಾಡಬ್ಯಾಡ, ನೆಂಟರೆಲ್ಲ ಓದಮ್ಯಾಕೆ ಮಾದೇವಂಗೆ ನಿಧಾನ್ವಾಗಿ ತಿಳಿ ಹೇಳಿ ಒಂದು ನಿರ್ಧಾರಕ್ಕೆ ಬಾ' ತಮ್ಮನಿಗೆ ಬುದ್ಧಿ ಹೇಳಿ ಹೊರಕ್ಕೆ ಕರ್ಕೊಂಡು ಬಂದರು ಅಂಬಿಕಾ.

ಮನೆ ತುಂಬಾ ಜನ. ಅಪರೂಪಕ್ಕೆ ಹಬ್ಬದ ನೆವದಲ್ಲಿ ವರ್ಷಕ್ಕೊಮ್ಮೆ ಸೇರಿರುವ ಅಕ್ಕ, ತಂಗಿ, ಮಕ್ಕಳು, ಮೊಮ್ಮಕ್ಕಳು, ಅಳಿಯ ಸೊಸೆಯರು, ಬಂಧು ಬಳಗ, ಹಬ್ಬದಡಿಗೆ ಉಂಡು ಖುಷಿ ಖುಷಿಯಾಗಿ, ತಮಾಷೆಯಾಗಿ, ವಿನೋದವಾಗಿ ಮಾತನಾಡುತ್ತಾ ಅಂಗಳದಲ್ಲಿ ಜಮಖಾನದ ಮೇಲೆ ಹಿರಿಯರು ಅಡ್ಡಾಗಿದ್ದರೆ, ಕಿರಿಯರು ಕುಳಿತು ಲಲ್ಲೆ ಹೊಡೆಯುತ್ತ ಒಬ್ಬರನೊಬ್ಬರು ರೇಗಿಸಿಕೊಳ್ಳುತ್ತಾ, ರೇಗಿಸುತ್ತ ತಮ್ಮದೇ ಪ್ರಪಂಚದಲ್ಲಿ ಮೈಮರೆತಿದ್ದರು, ಪುಟ್ಟ ಮಕ್ಕಳು ಒಳಗೂ ಹೊರಗೂ ಓಡಾಡುತ್ತಾ ಆಟವಾಡಿಕೊಂಡಿದ್ದರು. ಇನ್ನು ಗಂಡಸರೆಲ್ಲಾ ಕೋಣೆಯಲ್ಲಿ ಸೇರಿಕೊಂಡು ಇಸ್ಪೀಟು ಆಡುವಲ್ಲಿ ತಲ್ಲೀನರಾಗಿದ್ದರು. ಹೀಗೆ ಹಬ್ಬ ಹರಿದಿನ, ಮದುವೆ ಮುಂಜಿ, ಸಾವಿನ ಮನೆ, ತಿಥಿ ಮನೆಗಳಲ್ಲಿ ಸೇರಿದಾಗ ಇಸ್ಪೀಟು ಆಡುವುದು ಅಲ್ಲಿ ರೂಢಿಯಲ್ಲಿತ್ತು. ಹಾಗಾಗಿ ಅಲ್ಲೊಂದು ಸಾಮ್ರಾಜ್ಯ ನಿರ್ಮಾಣವಾಗಿತ್ತು. ಜಗದೀಶ ಅಯ್ನೋರು, ಅಂಬಿಕಾ ಇಷ್ಟು ಹೊತ್ತಿನ ತನಕ ಕೋಣೆಯೊಳಗೆ ಕುಳಿತು ಗಹನವಾದ ವಿಚಾರ ಮಾತನಾಡಿದ ವಿಚಾರವೇ ಅಲ್ಲಿದ್ದ ಯಾರಿಗೂ ತಿಳಿದಿರಲಿಲ್ಲ. ಅವರಿಬ್ಬರೂ ಇಲ್ಲಿಲ್ಲ ಅನ್ನೋ ವಿಚಾರವನ್ನೇ ಅಲ್ಲಿ ಗಮನಿಸುವವರು ಯಾರೂ ಇರಲಿಲ್ಲ. ಹಾಗಾಗಿ ಅಕ್ಕ ತಮ್ಮ ನೆಮ್ಮದಿಯಿಂದ ಹೊರ ಬಂದು ಯಾರನ್ನೂ ಮಾತನಾಡಿಸದೆ ತಮ್ಮ ಪಾಡಿಗೆ ಮುಂಬಾಗಿಲನ್ನು ದಾಟಿ ಮನೆಯ ಮುಂದಿನ ಜಗಲಿಯ ಮೇಲೆ ಮಕ್ಕಳಾಡುವುದನ್ನೇ ನೋಡುತ್ತಾ ಕುಳಿತುಕೊಂಡರು.

'ಅಕ್ಕ ನೋಡು, ಈ ಮನೆ ಏಟೊಂದು ಸಂತೋಸ್ವಾಗಿ ನಲಿದಾಡ್ತಾ ಐತೆ. ಬಂದವರ ಜೊತೆ ಮನೆಯವರು ಅದೇಟು ಕುಸಿ ಕುಸಿಯಾಗವ್ರೆ. ಈ ಕುಸಿನಾ ಎಂಗಕ್ಕ ಕಿತ್ಕಳಾದು' ವಿಷಾದವಾಗಿ ಅಕ್ಕನನ್ನು ನೋಡಿ ಜಗದೀಶರು ಕೇಳಿದರು.

'ಇನ್ನೂ ಅಂಗೇ ಇದ್ದೀಯಾ ಜಗ, ನೀಯೇನು ಮಾಡ್ಬಾರದ್ದು ಮಾಡ್ತಾ ಇದೀಯಾ. ಸುಮ್ಕಿರು, ಆಮೇಕೂ ಇಂಗೇ ಈ ಮನೆ ಇರ್ತದೆ. ಹಬ್ಬ ಮದ್ವೆ ಮುಂಜಿ ಅಂದ್ರೆ ಇಂಗೆ ಸೇರ್ಕತರೆ. ಒಂದೇ ಸೂರು ತಾನೆ, ನಿನ್ನ ಕಣ್ಮುಂದೇನೆ ಇರ್ತರೆ, ಬ್ಯಾರೆ ಎಲ್ಲಾಗರಾ ವೊಂಟೊಯ್ತಾರಾ, ನೀ ಸುಮ್ಕೆ ಚಿಂತೆ ಮಾಡ್ತೀಯಾ. ಆಗಾ ಕಾಲಕ್ಕೆ ಎಲ್ಲಾನೂ ಆಗ್ಲೇ ಬೇಕಲ್ವಾ ಜಗ. ಹೋಗೋರನ್ನ ಸಂತೋಸ್ವಾಗಿ ಕಳ್ಸು. ನಂಗೊತ್ತು ವೀರೇಸನ್ನ ನಿಂಗೆ ಬಿಟ್ಟಿರಾಕೆ ಆಗಕಿಲ್ಲ ಅಲ್ವಾ, ಅಲ್ಲೂ ಇಲ್ಲೂ ಎಲ್ಲು ಕಡೆನೂ ಓಡಾಡ್ಕೊಂಡು ಇರ್ತಾನೆ ಬುಡು. ವೀರೇಶನ್ನ ಕಂಡ್ರೆ ನಿಂಗೆ ಅದೆಷ್ಟು ಆಸೆ ನಿಂಗೆ ಜಗಾ, ಗಂಡ್ಮಗ ಅಂತ ಶ್ಯಾನೆ ಪಿರೂತಿ ನಿಂಗೆ. ಆ ದ್ಯಾವ್ರು ನಿಂಗೊಂದು ಗಂಡ ಮಗಾ ಕೊಡ್ಬೇಕಿತ್ತು ನೋಡು'.

ಪ್ರೀತಿಯಾ ತಮ್ಮನಿಗೆ ವಂಶೋದ್ಧಾರಕ್ಕಾಗಿ ಒಂದು ಗಂಡು ಕುಡಿನಾ ಕೊಡ್ಲಿಲ್ಲವಲ್ಲ ಅನ್ನೋ ಪರಿತಾಪದಿಂದ ಮರುಕಗೊಂಡರು ಅಂಬಿಕಾ.

ಅಕ್ಕನ ಮಾತಿಗೆ ಏನೂ ಉತ್ತರ ಹೇಳದೆ ಸುಮ್ಮನೆ ಕುಳಿತುಬಿಟ್ಟರು. ಗಂಡು ಮಕ್ಕಳಿಲ್ಲ ಅನ್ನೊ ಬೇಸರ ಸ್ವಲ್ಪ ದಿನ ಅವರಿಗೆ ಇದ್ದದ್ದು ನಿಜ. ಆದರೆ ಅದೇನು ಅಂತಹ ಚಿಂತೆ ಮಾಡಿ ಕೊರಗುವಂತಹ ವಿಚಾರ ಅಂತ ಅವರಿಗೆ ಎಂದೂ ಅನ್ನಿಸಿರಲಿಲ್ಲ. ಹೆಣ್ಣುಮಕ್ಕಳಿದ್ದಾರಲ್ಲ, ಮತ್ಯಾಕೆ ಚಿಂತೆ ಮಾಡಬೇಕು, ಮುತ್ತಿನಂತೆ ಮೂರು ಹೆಣ್ಣುಮಕ್ಕಳಿದ್ದಾರೆ. ಅವರನ್ನೇ ಚೆನ್ನಾಗಿ ಬೆಳೆಸಿ ಓದಿಸಿ ಒಳ್ಳೆ ಮನೆ ಸೇರಿದರೆ ಆಯ್ತು, ಕೊನೆಕಾಲಕ್ಕೆ ನೋಡಿಕೊಳ್ಳೋಕೆ ವೀರೇಶ ಹೇಗೂ ಇದ್ದಾನೆ. ನಮ್ಮ ಹೊಟ್ಟೆಯಲ್ಲಿ ಹುಟ್ಟದಿದ್ದರೂ ನಮ್ಮ ವಂಶದ ಕುಡಿ ಅವನು. ನಮ್ಮಮನೆ ಮಗಾ, ಆ ದೇವರು ಈ ವಂಶ ಬೆಳಗಿಸೋಕೆ ತಮ್ಮನಿಗಾದರೂ ಒಂದು ಗಂಡು ಕುಡಿ ಕೊಟ್ಟಿದ್ದಾನಲ್ಲ, ಇನ್ನೇನು ಬೇಕು. ಅವನನ್ನೇ ಮಗಾ ಅಂದುಕೊಂಡರೆ ಆಯ್ತು. ಅವನು ನಮ್ಮ ಮಗನೇ ತಾನೇ ಅನ್ನೋ ಮನೋಭಾವ ಅವರಿಗೆ. ಆದರೆ ಶಾಂಭವಿಗೆ ಗಂಡನಷ್ಟು ವಿಶಾಲ ಮನಸ್ಸು ಇಲ್ಲ. ವೀರೇಶನ ಮೇಲೆ ಪ್ರೀತಿ ಇದ್ದರೂ ಅದು ಮೈದುನನ ಮಗ ಎಂದಷ್ಟೆ. ಮುಂದೆ ತಮ್ಮ ಕೊನೆಗಾಲದಲ್ಲಿ ಅವನು ನೋಡಿಕೊಳ್ಳುತ್ತಾನೆ ಎಂಬುದನ್ನು ಕನಸಿನಲ್ಲಿಯೂ ಕಲ್ಪಿಸಿಕೊಳ್ಳಲು ಶಾಂಭವಿಗೆ ಮನಸ್ಸಿಲ್ಲ. ಅದೂ ಅಲ್ಲದೆ ತನ್ನ ಗಂಡ ತಮ್ಮ ಎಲ್ಲಾ ಆಸ್ತಿಯನ್ನು ತಮ್ಮನ ಮಗನಿಗೆ ಕೊಟ್ಟು ಬಿಟ್ಟರೆ ಅನ್ನೋ ಆತಂಕ ಕಾಡುತ್ತಿತ್ತು. ತನಗಿಲ್ಲದ ಪುತ್ರ ಭಾಗ್ಯ ವಾರಿಜಳಿಗೆ ಸಿಕ್ಕಿದ್ದು ಅವಳಿಂದ ಅರಗಿಸಿಕೊಳ್ಳಲಾಗಿರಲಿಲ್ಲ. ಗಂಡು ಮಗನನ್ನು ಹೆತ್ತು ಈ ಮನೆಯಲ್ಲಿ ತನಗಿಂತ ಹೆಚ್ಚಿನ ಮಹತ್ವ ಪಡೆದುಕೊಂಡು ಬಿಟ್ಟಳು ಅನ್ನೋ ಭ್ರಮೆಯಲ್ಲಿ ನಲುಗುತ್ತಿದ್ದಳು. ಅದಕ್ಕೆ ತಕ್ಕಂತೆ ವಾರಿಜಳೂ ವೀರೇಶನ ಹೆತ್ತ ಮೇಲೆ ತನಗೊಂದು ಕೊಂಬಿದೆ ಎನ್ನುವಂತೆಯೇ ನಡೆದುಕೊಳ್ಳುತ್ತಿದ್ದಳು. ಹಾಗಾಗಿ ಅನ್ಯೋನ್ಯದಿಂದಿದ್ದ ವಾರಗಿತ್ತಿಯರು ಇತ್ತೀಚಿನ ದಿನಗಳಲ್ಲಿ ಬದಲಾಗಿದ್ದರು. ಮನದೊಳಗೆ ಏನೆಲ್ಲ ಕೋಪ ದ್ವೇಷ, ಅಸಮಾಧಾನ, ಅಸಹನೆ ಇಟ್ಟುಕೊಂಡಿದ್ದರೂ ಎಲ್ಲರೆದುರು ಚೆನ್ನಾಗಿರುವಂತೆ ನಟಿಸುತ್ತಿದ್ದರು. ಅದು ಅಣ್ಣ ತಮ್ಮಂದಿರ ಗಮನಕ್ಕೂ ಬಂದಿದೆ. ಆ ಕುರಿತೇ ಚಿಂತೆ ಜಗದೀಶರಿಗೆ.

ಈ ಶಾಂಭಾ ನನ್ನ ಮಕ್ಕಳು, ಅವರ ಮಕ್ಕಳು ಅಂತಹಯಾಕೆ ಭೇದ ಮಾಡ್ತಾಳೊ, ಮಕ್ಕಳೆಲ್ಲಾ ಒಂದೇ ಅಲ್ವಾ, ಎಲ್ಲರೂ ಈ ಮನೆ ಮಕ್ಕಳೆ ಅಲ್ವಾ. ಈ ಶಾಂಭನಿಗೆ ಯಾವಾಗ ದೇವ್ರು ಬುದ್ದಿ ಕೊಡ್ತಾನೊ ಅವಳೊಬ್ಬಳು ಚೆನ್ನಾಗಿದ್ದಿದ್ದರೆ ಈ ಮನೆಯನ್ನು ಒಡೆಯುವಂತಹ ಪರಿಸ್ಥಿತಿಯೇ ಬರುತ್ತಿರಲಿಲ್ಲ. ತಮ್ಮನ ಹೆಂಡತಿ ವಾರಿಜನಾದ್ರೂ ತಿಳಿವಳಿಕೆಯಿಂದ ನಡೆದುಕೊಳ್ಳಬಾರದೆ, ತನಗೊಬ್ಬಳಿಗೆ ಗಂಡು ಹುಟ್ಟಿರುವುದು ಅಂತ ಆಡುತ್ತಾಳೆ. ಅವತ್ತು ನಾನೇ ನೋಡಿದೆನಲ್ಲ. ವೀರೇಶನಿಗೆ ಜ್ವರ ಬಂದಾಗ ಹೇಗೆಲ್ಲ ಆಡಿಬಿಟ್ಟಳು. ಶಾಂಭ, ಒಂದೆರಡು ದಿನ ನೋಡೋಣ ಇರು, ಮನೆಯಲ್ಲಿರೊ ಔಷಧೀನೇ ಹಾಕು, ಜ್ವರ ಕಡಿಮೆಯಾಗದಿದ್ದರೆ ಆಸ್ಪತ್ರೆಗೆ ಕರ್ಕೊಂಡು ಹೋದ್ರೆ ಆಯ್ತು ಅಂದಾಗ, 'ಅಯ್ಯೊ ಅಕ್ಕ, ಹೆಣ್ಣುಮಕ್ಕಳಾದ್ರೆ ಹಾಗೇ ಮಾಡಬಹುದಿತ್ತು, ಅವರು ತಡೆದುಕೊಳ್ಳುತ್ತಾರೆ, ಅದ್ರೆ ಗಂಡು ಮಕ್ಳು ಹಾಗಲ್ಲ, ಅವರಿಗೆ ಮನೆ ಔಷಧೀಗೆ ಹುಷಾರಾಗೋಲ್ಲ, ಆಸ್ಪತ್ರೆಗೆ ಕರ್ಕೊಂಡು ಹೋಗ್ಲೇಬೇಕು' ಅಂತ ಅಂದುಬಿಟ್ಟಾಗ ಶಾಂಭನ ಮುಖ ಕಂದಿಹೋಯಿತು. ತನಗೆ ಗಂಡು ಮಗು ಇಲ್ಲ ಅಂತಾನೆ ವಾರಿಜ ಹೀಗೆ ಹೇಳ್ತಾ ಇದ್ದಾಳೆ ಅಂತಾನೇ ಅಂದುಕೊಂಡುಬಿಟ್ಟಳು. ಮತ್ತೇನೂ ಮಾತನಾಡದೆ ಒಳಹೋಗಿಬಿಟ್ಟಿದ್ದಳು. ಗಂಡು ಮಗು ಹುಟ್ಟಿದ ಮೇಲೆ ವಾರಿಜ ಕೊಂಚ ಹೆಮ್ಮೆಯಿಂದಲೆ ಇದ್ದಾಳೆ. ಅವಳು ಬೇಕು ಅಂತ ಹೇಳಿರಲ್ಲ ಅಂತ ನನಗೊತ್ತು. ಮಗುವಿಗೆ ಜ್ವರ ಬಂದಿದೆ ಅನ್ನೋ ಆತಂಕದಲ್ಲಿ ಮನೆಯ ಹಿರಿಯರು ಆಡುತ್ತಿದ್ದ ಮಾತನ್ನು ಆಡಿಬಿಟ್ಟಿದ್ದಾಳೆ. ಹೆಣ್ಣುಮಕ್ಕಳಿಗೆ ಕಾಯಿಲೆ ವಿರುದ್ಧ ಹೋರಾಡುವ ಶಕ್ತಿ ಜಾಸ್ತಿ ಇರುತ್ತೆ, ಗಂಡು ಮಕ್ಕಳಿಗೆ ಇರೋಲ್ಲ ಅನ್ನೋದು ಹಳ್ಳಿಗಳಲ್ಲಿ ನಂಬಿಕೆ. ಅದನ್ನೇ ಆಡಿದ್ದಾಳೆ. ಅವಳಿಗೂ ಹೆಣ್ಣುಮಕ್ಕಳಿಲ್ಲವೇ, ಆದರೆ ಯಾವಾಗ ಯಾವ ಮಾತು ಆಡಬೇಕು ಅನ್ನುವ ತಿಳಿವಳಿಕೆ ಇಲ್ಲದ ಹುಡುಗಿ ಅವಳು. ಈ ಶಾಂಭನಿಗೂ ಅದೇ ದೊಡ್ಡದು ಆಗಿ ಬಿಟ್ತು. ಆ ಘಟನೆಯಿಂದ ಮನೆಯಲ್ಲಿ ಎರಡು ದಿನ ಮಾತಿಲ್ಲ, ಕಥೆ ಇಲ್ಲ. ಅವಳಿಗೆ ಎಷ್ಟೇ ಹೇಳಿದರೂ ಕೇಳುತ್ತಾಳೆಯೇ. ಮೊದಲೆ ಗಂಡು ಮಗುವಿಲ್ಲ ಅಂತ ಕೊರಗುತ್ತಿದ್ದಾಳೆ. ಆ ಕೊರಗಿನ ನಡುವೆ ಹೀಗೆಲ್ಲಾ ಆದರೆ ನೆಮ್ಮದಿಯಾಗಿರುವಳೇ. ಅವಳಿಗೂ ನೆಮ್ಮದಿಯಿಲ್ಲ, ತನಗೆ ಗಂಡು ಮಗು ಆಯಿತು ಅಂತ ಅಕ್ಕನಿಗೆ ಹೊಟ್ಟೆ ಉರಿ ಅಂತ ವಾರಿಜ ಅಂದುಕೊಂಡಿದ್ದಾಳೆ. ಇವರಿಬ್ಬರ ನಡುವೆ ನಾನು, ಮಾದೇವ ಪರಿಪಾಟಲು ಪಡಬೇಕಾಗಿದೆ.